ದಿನಾಂಕ 14-07-2025 ರಂದು ಸಾಕ್ಷಿಗೆ ಪ್ರಮಾಣ ವಚನ  ಬೋಧಿಸಲಾಯಿತು.

**ಪಾಟೀ ಸವಾಲುಃ  2 ನೇ ಎದುರುದಾರರ  ಪರವಾಗಿ ಶ್ರೀ ಎ.ಕೆ.ಎ  ವಕೀಲರವರಿಂದಃ**

ನಾನು ಮನೆಯಲ್ಲಿ ಇರುತ್ತೇನೆ. ನನ್ನ ಮನೆ ಪಟ್ಲದಲ್ಲಿ ಇರುತ್ತದೆ.  ಅಪಘಾತ ಆಗುವಾಗ ನಾನು ಪಟ್ಲದ ಮನೆಯಲ್ಲಿ ಇದ್ದೆನು. ಅಪಘಾತ ಸ್ಥಳದಲ್ಲಿ ನಾನು ಇಲ್ಲದೇ ಇದ್ದ ಕಾರಣ ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ನನಗೆ ಮದುವೆ ಆಗಿರುತ್ತದೆ. ಸಂಧ್ಯಾಪ್ರಭು ನನ್ನ ತಂಗಿ ಅವರಿಗೂ ಮದುವೆಯಾಗಿರುತ್ತದೆ. ಅಪಘಾತ ಆಗುವ 15 ವರುಷ ಹಿಂದೆ ನನಗೆ ಮದುವೆಯಾಗಿದೆ. ನನ್ನ ತಂಗಿಗೆ 11 ವರುಷದ ಹಿಂದೆ ಮದುವೆಯಾಗಿರುತ್ತದೆ. ಅಮ್ಮ ಮನೆಯಲ್ಲಿ ಒಬ್ಬರೇ ಇರುತ್ತಾರೆ. ಅಪಘಾತ ಸಮಯದಲ್ಲಿ ನನ್ನ ಅಮ್ಮ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಅಪಘಾತ ಸಮಯದಲ್ಲಿ ನನ್ನ ಅಮ್ಮ ಅವರ ಸ್ವಂತ ಹಣದಿಂದ ಅವರ ಜೀವನ ನಡೆಸುತ್ತಿದ್ದರು. ನನ್ನ ತಂಗಿ ಮನೆಯಲ್ಲಿ ಇರುತ್ತಾರೆ. ಅವರು ಪರ್ಕಳದಲ್ಲಿ ಗಂಡನ ಜೊತೆ ಬೇರೆ ಮನೆಯಲ್ಲಿ ಇರುತ್ತಾರೆ. ನನಗೆ ಒಬ್ಬ ಮಗ, ನನ್ನ ಹಾಗೂ ನನ್ನ ಮಗನ ಖರ್ಚನ್ನು ನನ್ನ ಗಂಡ ನೋಡಿಕೊಳ್ಳುತ್ತಾರೆ. 2 ನೇ ಅರ್ಜಿದಾರರಿಗೆ ಒಬ್ಬನೇ ಮಗ ಅವರ ಖರ್ಚು ಸಹ ಅವರ ಗಂಡನೇ ನೋಡಿಕೊಳ್ಳುತ್ತಿದ್ದಾರೆ. ಅಪಘಾತ ಸಮಯದಲ್ಲಿ ನನ್ನ ಅಮ್ಮನಿಗೆ ಯಾವುದೇ ಉದ್ಯೋಗ ಇರಲಿಲ್ಲ ಎಂದರೆ ಸರಿಯಲ್ಲ.  ಅವರಿಗೆ ಯಾವುದೇ ಆದಾಯ ಇರಲಾರದ ಕಾರಣ ನಾವು ಅವರಿಗೆ ಸಹಾಯ ಮಾಡುತ್ತಿದ್ದೆವು ಎಂದರೆ ಸರಿಯಲ್ಲ.

ನಾನು ಮೃತರ ವಾರಸುದಾರರು ಎಂದು ತೋರಿಸಲು ಯಾವುದೇ ದಾಖಲೆ ಹಾಕಿರುವುದಿಲ್ಲ. ಸದ್ರಿ ಕಾರಣಕ್ಕೋಸ್ಕರ ನಾವು ಮೃತರ ವಾರಸುದಾರರು ಅಲ್ಲ ಎಂದರೆ ಸರಿಯಲ್ಲ.  ಅಪಘಾತ ನನ್ನ ಅಮ್ಮನ ತಪ್ಪಿನಿಂದ ಆಗಿದ್ದ ಕಾರಣ ಎದುರುದಾರರು ಯಾವುದೇ ಪರಿಹಾರ ಕೊಡಲು ಅರ್ಹರಲ್ಲ ಎಂದರೆ ಸರಿಯಲ್ಲ.

**1 ನೇ** ಎದುರುದಾರರು **2 ನೇ** ಎದುರುದಾರರು **ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಪಾಟೀ ಸವಾಲುಃ 3 ನೇ ಎದುರುದಾರರ ಪರವಾಗಿ ಶ್ರೀ ಡಿ.ಬಿ.ಎಸ್ ವಕೀಲರವರಿಂದಃ**

ನನ್ನ ತಾಯಿ ಟೈಲರಿಂಗ್ ಉದ್ಯೋಗ ಮಾಡುತ್ತಿದ್ದರು ಎಂದು ಪ್ರಕರಣಕ್ಕಾಗಿ ಮೊದಲ ಬಾರಿ ಹೇಳುತ್ತಿರುವುದು ಎಂದರೆ ಸರಿಯಲ್ಲ. ನನ್ನ ತಾಯಿ ಉದ್ಯೋಗಕ್ಕೆ ಸಂಬಂದಪಟ್ಟ ಲೆಕ್ಕ ಪತ್ರ ಇಟ್ಟಿಲ್ಲ. ಟೈಲರಿಂಗ್ ವಸ್ತಗಳನ್ನು ಖರೀದಿ ಮಾಡಿದ ಬಗ್ಗೆ ಬಿಲ್ಲುಗಳು ನಮ್ಮ ಬಳಿ ಇರುವುದಿಲ್ಲ. ಟೈಲರಿಂಗ್ ಮಾಡಲು ಗ್ರಾಮ ಪಂಚಾಯಿತಿಯಿಂದ ಅನುಮತಿ ಪತ್ರ ಪಡೆದುಕೊಂಡಿರುವುದಿಲ್ಲ. ನನ್ನ ಪ್ರಕಾರ ಅವರ ವಾರ್ಷಿಕ ಆದಾಯ 1,20,000/- ರೂ ಬರುತ್ತಿತ್ತು. ಈ ವಿಚಾರವವನ್ನು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಉಲ್ಲೇಖ ಮಾಡಿಲ್ಲ. ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 2 ನೇ ಪುಟ ಪ್ಯಾರಾ ನಂಬ್ರ 7 ರಲ್ಲಿ 60,000/- ರೂ ವಾರ್ಷಿಕ ಆದಾಯ ಕಾಣಿಸಿದ್ದೇನೆ ಎಂದರೆ ಸರಿ. ನಾವು ಇಬ್ಬರೂ ಕೂಡ ಪರ್ಕಳದ ಟ್ಯಾಕ್ಸ್ ಆಫೀಸಿನಲ್ಲಿ ಕೆಲಸ ಮಾಡುವುದಿಲ್ಲ. ನನ್ನ ತಾಯಿಗೆ ಅರೋಗ್ಯ ವಿಮೆ ಕಾರ್ಡ್ ಇತ್ತಾ ಎಂದು ನನಗೆ ಗೊತ್ತಿಲ್ಲ. ಆಯುಷ್ಮಾನ್ ಕಾರ್ಡ್ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಾಯಿಗೆ ಖರ್ಚು ಮಾಡಿದ ಎಲ್ಲಾ ಹಣ ಇತರ ವಿಮೆಗಳಲ್ಲಿ ಸಿಕ್ಕಿದೆ ಎಂದರೆ ಸರಿಯಲ್ಲ. ನನ್ನ ತಾಯಿ ಔಷದ ಖರೀದಿ ಮಾಡಲು ಮೆಡಿಕಲ್ ಶಾಪ್ಗೆ ಹೋಗುವಾಗ ಅಪಘಾತ ಆಗಿತ್ತು. ನನ್ನ ತಾಯಿ ಅಪಘಾತದಿಂದ ಮರಣಹೊಂದಿಲ್ಲ ಅವರು ಬಿದ್ದು ಗಾಯವಾಗಿ ಮರಣಹೊಂದಿರುತ್ತಾರೆ ಎಂದರೆ ಸರಿಯಲ್ಲ. ಈ ಅಪಘಾತಕ್ಕೂ ಅಮ್ಮನ ಮರಣಕ್ಕೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿಯ ನಿರ್ಲಕ್ಷತನದಿಂದ ಅಪಘಾತವಾದ ಕಾರಣ 3 ನೇ ಎದುರುದಾರರ ವಿಮಾ ಕಂಪನಿಯು ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.  ಉಳಿದ ಪಾಟೀ ಸವಾಲು 2 ನೇ ಎದುರುದಾರರು ಮಾಡಿದ ಪಾಟೀ ಸವಾಲನ್ನು ಅವರ ಕೋರಿಕೆ ಮೇರೆಗೆ  ಅಳವಡಿಸಿಕೊಳ್ಳಲಾಗಿದೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಂ.ಎ.ಸಿ.ಟಿ.   ಉಡುಪಿ.